


ಕುಟ್ಟಲಾರಂಭಿಸಿತು. ಒಮ್ಮೆ ಸುಸೂತ್ರವಾಗಿ ರೈಲು ಹತ್ತಿ ಅದು ಹೊರಟರೆ ಸಾಕು ಎನ್ನುವಂಥ ಭಾವ. 'ಉಶ್' ಎನ್ನುತ್ತ 'ನಿನ್ನೆ, ಮೊನ್ನೆ ಏನಿರಲಿಲ್ಲ. ಇವತ್ತ ಒಮ್ಮಿಂದೊಮ್ಮಿಲೆ ಶುರುವಾಗೇದ' ಎಂದೆ. 'ಇವೆಲ್ಲಾ ಇರೋವನರಿ ವೈನಿ. ಈಗ ಎಲ್ಲಾ ಕಡೆ ಕಾಮನ್ ಆಗಿಬಿಟ್ಟಾವ. ಮಂದಿ ಜಾಸ್ತಿ ಓದಿ ಶ್ಯಾಣ್ಯಾ ಆಗಾಕತ್ತಾರು. ಹರತಾಳ ಮಾಡಾಕ, ಜಗಳಾ ಆಡಾಕ ವಿಷಯಗೊಳು ಜಾಸ್ತಿ ಆಗ್ಯಾವ ನೋಡ್ರಿ. ಬೆಳಕೋತನ ಹೊಂಟಾವ' ಎಂದು ವಿಷಾದದ ಧ್ವನಿಯಲ್ಲಿ ನುಡಿದ. 'ಹೌದು, ಏನ ಮಾಡೋದು? ಜಗತ್ತು ಬದ್ಲಾಗ್ಲಿಕ್ಕತ್ತದ. ತಂತ್ರಜ್ಞಾನ ಬೆಳೆಧಂಗ ಮಂದಿ ಮುಂದವರೀಲಿಕ್ಕತ್ತಾರ. ಮಾನವೀಯತಾ ಮಾತ್ರ ಹಿಂದ ಉಳಿಲಿಕ್ಕತ್ತದ' ಎಂದೆ. 'ಹೌದರಿ, ಇಲ್ಲದ್ದ ಎಲ್ಲಾ ತಲಿಕೆಡಸೋ ವಿಚಾರಗೊಳ್ನ ಬಿಟ್ಟು ಖರೇ ಮನಶಾರಾದ್ರ ಎಲ್ಲಾ ಬರೋಬರ ಆಕ್ಕೇತ್ರಿ'ಎಂದು ನಿಟ್ಟುಸಿರು ಬಿಟ್ಟ.

ನನಗೂ ನಿಜವೆನಿಸಿತ್ತು. ಅಂದಿನ ದಿನಗಳಲ್ಲಿ ಪರಸ್ಪರರ ಮೇಲೆ ಅದೆಷ್ಟು ನಂಬಿಕೆ ಇತ್ತು. ಇಂದು ಆ ಬುನಾದಿ ಎಲ್ಲೋ ಬಿರಕು ಬಿಟ್ಟಂತೆ ಭಾಸ. 'ಹೋಗ್ಲಿ ಬಿಡ್ರಿ, ಕಾಲ ಬದ್ಲಾಗೇತಿ. ಜೋಡಿ ಮನಶಾರೂ ಬದಲಾಗ್ಯಾರ. ನಾವ ಎಷ್ಟು ಮಾತಾಡಿದ್ರೂ ಅಷ್ಟ. ಮತ್ತ... ಸರ್ ಹೆಂಗದಾರ? ಮಕ್ಕಳಿಬ್ಬರೂ ಹೆಂಗದಾರ?'ಎಂದು ವಿಷಯಾಂತರ ಮಾಡಿದ. 'ಎಲ್ಲಾರೂ ಆರಾಮಿದ್ದಾರಪಾ. ಅವರವರ ಕೆಲಸದಾಗ ಬಿಝಿ ಇರತಾರ. ಹಿಂಗಾಗಿ ಇಲ್ಲೆ ಏನರ ಕೆಲಸ ಇದ್ದರ ನಾ ಒಬ್ಬಾಕಿನ ಬಂದ ಹೋಗ್ತೇನಿ'ಎಂದೆ. ಅಷ್ಟರಲ್ಲಿ ರೈಲು ಬರುವ ಮುನ್ಸೂಚನೆ ಬಂದಿತು. ಪ್ಲಾಟ್‌ಫಾರ್ಮ ಮೇಲೆ ಜನಸಂದಣಿ ಹೆಚ್ಚಾಯಿತು. 'ನೀವು ಮದಲ ಒಳಗ ಹತ್ತರಿ ವೈನಿ'ಎಂದ ಅನ್ವರ್. ಪ್ರತಿ ಬಾರಿಯೂ ನಾನು ಒಳಗೆ ಹತ್ತಿದ ಮೇಲೆ ಅವನೂ ಒಳಗೆ ಬಂದು ಸೀಟಿನ ಕೆಳಗೆ ಸಾಮಾನು ಇಟ್ಟುಕೊಡುವ ಸಂಪ್ರದಾಯ. ನಾನು ಮೊದಲೇ ದುಡ್ಡು ಕೊಟ್ಟು ಬಿಡುತ್ತಿದ್ದೆ. ತಕ್ಷಣ ನೆನಪಾಗಿ 'ಅನ್ವರ್, ಎಷ್ಟಾತು ಹೇಳ್ರಿ? ಮತ್ತ ಗಾಡಿ ಬಂದ ಮ್ಯಾಲೆ ಗಡಬಿಡಿಯಾಗ್ತದ'ಎನ್ನುತ್ತ ಪರ್ಸ ತೆರೆದೆ. 'ಹೆ... ಏನೂ ಬ್ಯಾಡ್ರಿ. ಎಷ್ಟ... ಇಪ್ಪತ್ತು ವರ್ಷದ ಮ್ಯಾಲೆ ಭೆಟ್ಟಿ ಆಗೀರಿ. ಮತ್ತ ಭೆಟ್ಟಿ ಆಗತೇವೊ... ಇದ ಕಡಿ ಭೆಟ್ಟಿನೋ ಗೊತ್ತಿಲ್ಲ' ಎಂದು ಮೌನವಾದ. 'ಏ ಹಂಗೆಲ್ಲಾ ಅನಬ್ಯಾಡ್ರಿ. ಮತ್ತ ಭೆಟ್ಟಿ ಆಗೋಣಂತ. ಈಗ ಎಷ್ಟು ಹೇಳ್ರಿ?'ಎಂದು ಒತ್ತಾಯಿಸಿದೆ. ಮೊದಲೆಲ್ಲಾ 'ನಿಮಗ ತಿಳದಷ್ಟು ಕೊಡ್ರಿ' ಎನ್ನುತ್ತಿದ್ದವ ಇಂದು 'ಬ್ಯಾಡ್ರಿ...' ಎಂಬ ಮಂತ್ರ ಜಪಿಸಲು ಆರಂಭಿಸಿದ್ದಾನೆ. ನನಗೇನೋ ಕಸಿವಿಸಿ. ಅಷ್ಟರಲ್ಲಿ ರೈಲು ಬಂದೇ ಬಿಟ್ಟಿತು. ನನ್ನ ಹಿಂದೆಯೇ ಹತ್ತಿದ ಅನ್ವರ್ ಬೇಡವೆಂದರೂ ಸಾಮಾನು ಸೀಟಿನ ಕೆಳಗೆ ಇಟ್ಟುಕೊಟ್ಟ. ಇನ್ನೂರರ ನೋಟು ತೆಗೆದು ಕೊಡಲು ಹೋದರೆ 'ಈ ಸರೆ ಬ್ಯಾಡ್ರಿ. ಹೋಗಿ ಬರ್ರಿ. ಮುಟ್ಟಿದ ಕೂಡಲೆ ಫೋನ್ ಮಾಡ್ರಿ' ಎನ್ನುತ್ತ ಇಳಿದು ಕಿಟಕಿಯಲ್ಲಿ ಕೈ ಬೀಸಿದ. ಎಂದೂ ಹೀಗೆ ಹೇಳಿದವನಲ್ಲ... ನಾನೂ ಕೈ ಬೀಸುತ್ತಿದ್ದಾಗಲೇ ರೈಲು ಮುಂದೋಡಿ ಜನಗಳ ಜೊತೆಗೆ ಅವನೂ ಹಿಂದೆ ಓಡತೊಡಗಿದ. ಎಣ್ಣೆಗೆಂಪು ಬಣ್ಣದ, ಕಣ್ಣ ಬಳಿ ಕಡಲೆಕಾಳು ಗಾತ್ರದ ಮಚ್ಚೆ ಇದ್ದ ಮುಖ... ಮರೆಯಾಯಿತು.

ಹೌದು... ಅವನ ಮುಖ ಮರೆತೇ ಹೋಗಿತ್ತು. ಸುಮಾರು ಇಪ್ಪತ್ತು ವರ್ಷಗಳೇ ಆಗಿ ಹೋಗಿತ್ತಲ್ಲ... ಮೊದಲೆಲ್ಲ ಬೆಂಗಳೂರಿನಿಂದ ಬೆಳಗಾವಿಗೆ ಟಿಕೆಟ್ ಬುಕ್ ಆಗುತ್ತಿದ್ದಂತೆ ಅನ್ವರ್‌ನ ಪಕ್ಕದ ಮನೆಯ ಲ್ಯಾಂಡ್‌ಲೈನಿಗೆ ಫೋನ್ ಹೋಗುತ್ತಿತ್ತು. ತನ್ನ ರಿಕ್ಷಾದೊಂದಿಗೆ ಅವನು ನಮ್ಮನ್ನು ಕರೆದೊಯ್ಯಲು ರೇಲ್ವೆ ಸ್ಟೇಷನ್ನಿಗೆ ಹಾಜರಾಗುತ್ತಿದ್ದ. ಅಲ್ಲಿಂದ ಆರಂಭವಾದ ನಮ್ಮ ಪಯಣ ತಿರುಗಿ ಬೆಂಗಳೂರಿಗೆ ಚನ್ನಮ್ಮಾ ರೈಲು ಹತ್ತುವವರೆಗೂ ಮುಂದುವರೆಯುತ್ತಿತ್ತು. ನಾವು ಬಂದಾಗಲೆಲ್ಲ ಹೆಚ್ಚಾಗಿ ಅವನ ಆಟೊ ನಮಗೋಸ್ಕರವೇ ಓಡುತ್ತಿತ್ತು. ಕೊನೆಕೊನೆಯಲ್ಲಿ